# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **279** |
| **ಸದಸ್ಯರ ಹೆಸರು** | : | **ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು)** |
| **ಉತ್ತರಿಸಬೇಕಾದ ದಿನಾಂಕ** | : | **15-02-2023** |
| **ಉತ್ತರಿಸುವ ಸಚಿವರು** | : | **ಮಾನ್ಯ ಕಂದಾಯ ಸಚಿವರು** |

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ) ಕಳೆದ 03 ವರ್ಷಗಳಿಂದ ವಿಜಯಪುರ ಜಿಲ್ಲೆಯಲ್ಲಿ ಅತಿವೃಷ್ಟಿ ಹಾಗೂ ಅನಾವೃಷ್ಟಿಯಿಂದ ತೋಟಗಾರಿಕೆ ಹಾಗೂ ಕೃಷಿ ಬೆಳೆಗಳು ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)<br><br>(ಆ) ಹಾನಿಗೊಳಗಾದ ಬೆಳೆಗಳಿಗೆ ಸರ್ಕಾರದಿಂದ ನೀಡಿರುವ ಪರಿಹಾರದ ವಿವರ ನೀಡುವುದು;</td>
<td>ಬಂದಿದೆ.<br><br>ಕಳೆದ 03 ವರ್ಷಗಳಿಂದ ವಿಜಯಪುರ ಜಿಲ್ಲೆಯಲ್ಲಿ ಅತಿವೃಷ್ಟಿ ಹಾಗೂ ಪ್ರವಾಹದಿಂದ ಹಾನಿಯಾಗಿರುವ ತೋಟಗಾರಿಕೆ ಹಾಗೂ ಕೃಷಿ ಬೆಳೆಗಳ ವಿವರ ಹಾಗೂ ಸರ್ಕಾರದಿಂದ ನೀಡಿರುವ ಪರಿಹಾರದ ವಿವರ ಈ ಕೆಳಕಂಡಂತಿದೆ:<br><br>
<table>
<tr><th>ವರ್ಷ</th><th>ಕ್ಷೇತ್ರ (ಹೆಕ್ಟೇರ್‌ಗಳಲ್ಲಿ)</th><th>ವಿತರಿಸಿದ ಪರಿಹಾರ (ರೂ. ಲಕ್ಷಗಳಲ್ಲಿ)</th></tr>
<tr><td>2020-21</td><td>143782.42</td><td>13233.72</td></tr>
<tr><td>2021-22</td><td>1006.83</td><td>128.04</td></tr>
<tr><td>2022-23</td><td>34170.19</td><td>4256.00</td></tr>
<tr><td>ಒಟ್ಟು</td><td>178959.44</td><td>17617.76</td></tr>
</table>
<br>ತಾಲ್ಲೂಕುವಾರು ವಿವರವನ್ನು ಅನುಬಂಧ-1ರಲ್ಲಿ ಒದಗಿಸಿದೆ.</td></tr>
<tr><td>(ಇ) ಜಿಲ್ಲೆಯ ಕೆಲವು ನದಿಗಳಲ್ಲಿ ಮಹಾಪೂರವಾಗುತ್ತಿದ್ದು, ಇದನ್ನು ತಡೆಯಲು ಸರ್ಕಾರವು ಹಮ್ಮಿಕೊಂಡಿರುವ ಯೋಜನೆಗಳು ಯಾವುದು? (ವಿವರ ನೀಡುವುದು)</td>
<td>ನದಿ ಪಾತ್ರದಲ್ಲಿರುವ ಸೇತುವೆ/ಕಲ್ವರ್ಟ್‌ಗಳಲ್ಲಿ ನೀರು ಸರಾಗವಾಗಿ ಹರಿದು ಹೋಗುವಂತೆ ಸೇತುವೆ/ಕಲ್ವರ್ಟ್‌ಗಳ ಸುತ್ತಮುತ್ತ ಬೆಳೆದಿರುವ ಜಾಲಿ ಕಂಟಿಗಳನ್ನು ಸ್ವಚ್ಛಗೊಳಿಸುವ ಕುರಿತು ಸಂಬಂಧಪಟ್ಟ ಇಲಾಖೆಯವರ ವಾರ್ಷಿಕ ನಿರ್ವಹಣಾ ಕಾರ್ಯದಡಿ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಮುಂದುವರೆದು ಹವಾಮಾನ ಇಲಾಖೆಯ ಮುನ್ಸೂಚನೆಯನ್ನು ಆಧರಿಸಿ ಅತಿವೃಷ್ಟಿ/ಪ್ರವಾಹದ ಸಂದರ್ಭದಲ್ಲಿ ಜಲಾಶಯಗಳಿಂದ ನೀರನ್ನು ನದಿ ಪಾತ್ರಕ್ಕೆ ಹರಿಬಿಡುವ ಕುರಿತು ಉಂಟಾಗಬಹುದಾದ ಅನಾಹುತಗಳ ಬಗ್ಗೆ ಗ್ರಾಮಗಳ ಸಾರ್ವಜನಿಕರಿಗೆ ಡಂಗುರ ಹೊಡೆಸುವುದರ ಮೂಲಕ ತಿಳುವಳಿಕೆಯನ್ನು ನೀಡಿ ಸೂಕ್ತ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.</td></tr>
</table>

ಕಂಇ 48 ಟಿಎನ್‌ಆರ್ 2023

(ಆರ್. ಅಶೋಕ)
ಕಂದಾಯ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 279ಕ್ಕೆ

# ಅನುಬಂಧ-1

(ಕ್ಷೇತ್ರ: ಹೆಕ್ಟೇರ್‌ಗಳಲ್ಲಿ, ರೂ.ಲಕ್ಷಗಳಲ್ಲಿ)

| ಕ್ರ. ಸಂ | ತಾಲ್ಲೂಕು | ಕೃಷಿ ಮತ್ತು ತೋಟಗಾರಿಕೆ ಬೆಳೆ ಹಾನಿ | | | | | |
|---|---|---|---|---|---|---|---|
| | | 2020-21 | | 2021-22 | | 2022-23 | |
| | | ಕ್ಷೇತ್ರ | ವಿತರಿಸಿದ ಪರಿಹಾರ | ಕ್ಷೇತ್ರ | ವಿತರಿಸಿದ ಪರಿಹಾರ | ಕ್ಷೇತ್ರ | ವಿತರಿಸಿದ ಪರಿಹಾರ |
| 1. | ಬಬಲೇಶ್ವರ | 1421.53 | | 0.00 | | 745.76 | |
| 2. | ಬ.ಬಾಗೇವಾಡಿ | 24966.68 | | 0.00 | | 716.80 | |
| 3. | ಚಡಚಣ | 12162.75 | | 0.00 | | 2.50 | |
| 4. | ದೇ.ಹಿಪ್ಪರಗಿ | 6284.97 | | 0.00 | | 10070.00 | |
| 5. | ಇಂಡಿ | 30831.19 | | 0.00 | | 5.80 | |
| 6. | ಕೊಲ್ಹಾರ | 4729.34 | | 0.00 | | 25.08 | |
| 7. | ಮುದ್ದೇಬಿಹಾಳ | 13706.02 | 13233.72 | 541.00 | 128.04 | 199.84 | 4256.00 |
| 8. | ನಿಡಗುಂದಿ | 4395.08 | | 465.83 | | 5.50 | |
| 9. | ಸಿಂದಗಿ | 20952.68 | | 0.00 | | 81.77 | |
| 10. | ತಾಳಿಕೋಟೆ | 12545.46 | | 0.00 | | 21063.27 | |
| 11. | ತಿಕೋಟಾ | 5497.39 | | 0.00 | | 206.40 | |
| 12. | ವಿಜಯಪುರ | 6289.33 | | 0.00 | | 803.54 | |
| 13. | ಆಲಮೇಲ | 0.00 | | 0.00 | | 243.93 | |
| ಒಟ್ಟು | | 143782.42 | 13233.72 | 1006.83 | 128.04 | 34170.19 | 4256.00 |